ಇರುವುದರಿಂದ ನಾವು ನಿಗದಿಪಡಿಸಿರುವಂತಹ ಅವಧಿಯಲ್ಲಿ ಬೇರೆಯವರು ಮೀನುಗಾರಿಕೆ ಮಾಡುವುದರಿಂದ ನಮಗೆ ಆಗುವಂತಹ ತೊಂದರೆಯನ್ನು ನಿವಾರಿಸಲಿಕ್ಕೆ ಸರ್ಕಾರ ಏನು ಕ್ರಮವನ್ನು ಕೈಗೊಳ್ಳುತ್ತದೆ? ನದಿ ಸಮುದ್ರವನ್ನು ಸೇರುವಂತಹ ಪ್ರದೇಶಗಳಲ್ಲಿ ಹೂಳೆತ್ತುವಿಕೆ ಸಾಧ್ಯವಾಗದೆ ಅನೇಕ ದೋಣಿ ದುರಂತಗಳು ಸಂಭವಿಸುತ್ತಿರುವಂತಹ ಹಿನ್ನೆಲೆಯಲ್ಲಿ ಅಲ್ಲಿ ಡಿ-ಸಿಲ್ಟಿಂಗ್ ಮಾಡಲು ಏನು ಕ್ರಮವನ್ನು ಕೈಗೊಳ್ಳಲಾಗುತ್ತದೆ?

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೇ, ಮಳೆಗಾಲದ ಋತುವಿನಲ್ಲಿ ಕರಾವಳಿ ಭಾಗದಲ್ಲಿ ಮೀನು ಮರಿ ಉತ್ಪಾದನೆಯಾಗುವುದರಿಂದ ಆ ಋತುವಿನಲ್ಲಿ ಕಡ್ಡಾಯವಾಗಿ ಮೀನುಗಾರಿಕೆ ಮಾಡಬಾರದು ಎಂಬುದು ಸರ್ಕಾರದ ನಿಲುವು. ಅದನ್ನು ನಾವು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದೇವೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಮಳೆಗಾಲದಲ್ಲಿ ಮೀನುಗಾರಿಕೆಯನ್ನು ನಿಷೇಧಿಸಲಾಗಿದೆ. ಆ ಸಂದರ್ಭದಲ್ಲಿ ಮೀನುಗಾರಿಕೆ ಮಾಡಿದರೆ ಏನು ಕ್ರಮವನ್ನು ಕೈಗೊಳ್ಳಲಾಗುವುದು? ಮಲೆನಾಡಿನ ಪ್ರದೇಶಗಳಲ್ಲಿ ಒಳನಾಡು ಮೀನುಗಾರಿಕೆ ಮಾಡಲಿಕ್ಕೆ ಅನೇಕ ಅವಕಾಶಗಳಿವೆ. ಅದಕ್ಕಾಗಿ ಏನಾದರೂ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆಯೇ?

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೇ, ಈ ಋತುವಿನಲ್ಲಿ ಮೀನುಗಾರಿಕೆ ಮಾಡಬಾರದು ಎಂಬ ನಿಷೇಧ ಇದ್ದರೂ ಕೂಡ ಕೆಲವರು ಮೀನುಗಾರಿಕೆಗೆ ಹೋಗುತ್ತಿರುತ್ತಾರೆ. ಇದರ ಬಗ್ಗೆ ನಮಗೆ ದೂರುಗಳು ಬಂದಿವೆ. ಅವುಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಿಕ್ಕೆ ನಾವು ಜಿಲ್ಲಾಧಿಕಾರಿಗಳಿಗೆ ಸೂಕ್ತವಾದ ನಿರ್ದೇಶನ ಕೊಟ್ಟಿದ್ದೇವೆ.

ಸಕ್ಕರೆ ನಿಯಂತ್ರಣ ಕಾಯ್ದೆ ಪ್ರಕಾರ ರೈತರಿಗೆ ಬಡ್ಡಿ ಕೊಡುವುದು.

176(2349)

ಶ್ರೀ ರಮೇಂದ್ರನಾಥ್ ಎಸ್.ಎ.(ಮಾಯಕೊಂಡ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸಕ್ಕರೆ ನಿಯಂತ್ರಣ ಕಾಯಿದೆ ಪ್ರಕಾರ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡುವ ರೈತರಿಗೆ ಕೊಡಬೇಕಾದಂತಹ ಕಬ್ಬಿನ ಬಿಲ್ಲಿನ ಹಣವನ್ನು

ತಡವಾಗಿ ಕೊಟ್ಟಲ್ಲಿ ಅದಕ್ಕೆ ಬಡ್ಡಿ ಸೇರಿಸಿ ಕೊಡಬೇಕೆಂದು ಇರುವುದು ನಿಜವೇ?

ಆ) ಹಾಗಿದ್ದಲ್ಲಿ, ಕೊಡಬೇಕಾದ ಬಡ್ಡಿ ದರವೇನು?

ಇ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಪೈಕಿ ಎಷ್ಟು ಕಾರ್ಖಾನೆಗಳಲ್ಲಿ ಬಡ್ಡಿ ಹಾಕಿ ಕೊಡಲಾಗುತ್ತಿದೆ; ಅವುಗಳ ಹೆಸರೇನು; ಕೊಡುತ್ತಿರುವ ಬಡ್ಡಿ ದರವೇನು?

ಈ) ಉಳಿದ ಕಾರ್ಖಾನೆಗಳೂ ಹಿಂದಿನಿಂದಲೇ ಬಡ್ಡಿ ಸೇರಿಸಿ ಕೊಡುವಂತೆ ಸರ್ಕಾರವು ಕೂಡಲೇ ಆದೇಶಿಸುವುದೇ?

ಶ್ರೀ ಎ.ಕೃಷ್ಣಪ್ಪ (ಪಶು ಸಂಗೋಪನ ಮತ್ತು ಸಕ್ಕರೆ ಸಚಿವರು):

ಅ) ಹೌದು. ಕೇಂದ್ರ ಸಕ್ಕರೆ ನಿಯಂತ್ರಣ ಕಾಯಿದೆ- 1966ರ ಪ್ರಕಾರ ಕಬ್ಬು ಸರಬರಾಜು ಮಾಡಿದ ರೈತರಿಗೆ ಕಬ್ಬು ಸರಬರಾಜಾದ 14 ದಿನಗಳಲ್ಲಿ ಕಬ್ಬು ಬಿಲ್ಲು ಪಾವತಿಸದಿದ್ದರೆ ಬಡ್ಡಿ ಸೇರಿಸಿ ಪಾವತಿಸಬೇಕೆಂದು ಇದೆ.

ಆ) ನಿಯಮಾನುಸಾರ ಕೊಡಬೇಕಾಗಿರುವ ಬಡ್ಡಿದರ ವಾರ್ಷಿಕ ಶೇ. 15ರಷ್ಟಾಗುತ್ತದೆ.

ಇ) ರಾಜ್ಯದಲ್ಲಿ ಇದುವರೆಗೂ ಯಾವುದೇ ಸಕ್ಕರೆ ಕಾರ್ಖಾನೆಗಳು ತಮ್ಮ ರೈತರಿಗೆ ಬಡ್ಡಿಯನ್ನು ಪಾವತಿಸಿರುವುದಿಲ್ಲ.

ಈ) ಕಬ್ಬು ಬೆಳೆಗಾರರು ಸುಸ್ಥಿತಿಯಲ್ಲಿ ಇರಬೇಕಾದರೆ ಸಕ್ಕರೆ ಕಾರ್ಖಾನೆಗಳೂ ಸಹ ಉತ್ತಮ ಸ್ಥಿತಿಯಲ್ಲಿ ಇರಬೇಕಾಗುತ್ತದೆ. ಕಾರ್ಖಾನೆಗಳು ತಮ್ಮ ವ್ಯಾಪ್ತಿಯ ರೈತರ ಹಿತ ಕಾಪಾಡಲು : ಕಬ್ಬಿನ ಬೆಲೆ ಪಾವತಿಸಲು ವಿವಿಧ ಮೂಲಗಳಿಂದ ಹಣಕಾಸು ವ್ಯವಸ್ಥೆ ಮಾಡಿ ನಿಭಾಯಿಸುತ್ತಿವೆ. ಉದ್ದೇಶಪೂರ್ವಕವಾಗಿ ಬಾಕಿ ಉಳಿಸಿಕೊಳ್ಳುವ ಕಾರ್ಖಾನೆಗಳ ವಿರುದ್ಧ ಸಕ್ಕರೆ ನಿಯಂತ್ರಣ ಆದೇಶದನ್ವಯ ಕ್ರಮ ಕೈಗೊಳ್ಳಲು ಅವಕಾಶವಿದೆ.

11.10 ಎಎಂ.

ಶ್ರೀ ಎಸ್.ಎ.ರವೀಂದ್ರನಾಥ್: ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ 1966ರ ಸಕ್ಕರೆ ನಿಯಂತ್ರಣ ಕಾಯಿದೆ ಪ್ರಕಾರ ಕಬ್ಬು ಸರಬರಾಜು ಮಾಡಿದ ರೈತರಿಗೆ ಬಿಲ್ಲು ಪಾವತಿ ಮಾಡಿದ 15 ದಿನಗಳಾದ ಮೇಲೆ ಏನು ಬಿಲ್ ಕೊಡುತ್ತಾರೆ ಅದಕ್ಕೆ ಅವರಿಗೆ ಬಡ್ಡಿ ಕೊಡಬೇಕೆಂದು ಆರ್ಡರ್ ಮಾಡಿತ್ತು. ಆದರೆ ಇವತ್ತು ಸಾಕಷ್ಟು ಹಣ ರೈತರಿಗೆ ಕೊಡತಕ್ಕಂಥಾದ್ದು ಇದ್ದರೂ ಸಹ ಯಾವ ಸಕ್ಕರೆ ಕಂಪನಿಯವರೂ ಕೂಡ ಹಣ

ಕೊಡುತ್ತಿಲ್ಲ. ಬಡ್ಡಿ ಹಾಕಿ ಅವರಿಗೆ ಹಣ ಕೊಡಬೇಕೆಂದು ನಾನು ತಮ್ಮ ಮುಖಾಂತರ ಅವರಿಗೆ ಒತ್ತಾಯ ಮಾಡುತ್ತೇನೆ.

ಶ್ರೀ ಎ.ಕೃಷ್ಣಪ್ಪ: ಸನ್ಮಾನ್ಯ ಅಧ್ಯಕ್ಷರೆ, ಸಕ್ಕರೆ ನಿಯಂತ್ರಣ ಕಾಯಿದೆ ತಿದ್ದುಪಡಿ ಈಗ ತಾನೇ ಆಗಿದೆ. ಹಾಗೆ ತಿದ್ದುಪಡಿ ಆಗಿ ಪ್ರಥಮವಾಗಿ ಈ ದೇಶದಲ್ಲಿ ಎಲ್ಲಾ ರಾಜ್ಯ ಸರ್ಕಾರಗಳಿಗೆ ಸ್ವಲ್ಪ ಮಟ್ಟಿನ ಅಧಿಕಾರ ಕೊಟ್ಟಿದ್ದಾರೆ. ಹಾಗಾಗಿ ಅರಿಯರ್ಸ್ ಕೊಡುವ ವಿಚಾರದಲ್ಲಿ ಯಾರು ತಡ ಮಾಡಿದ್ದಾರೆ ಅದಕ್ಕೆ ಉದಾಹರಣೆಯಾಗಿ ಕರ್ನಾಟಕ ರಾಜ್ಯದಲ್ಲಿ ಇಡೀ ದೇಶದಲ್ಲಿ ಪ್ರಥಮವಾಗಿ ಒಂದು ಕಾರ್ಖಾನೆ ಮೇಲೆ ಸಕ್ಕರೆ ನಿಯಂತ್ರಣ ಕಾನೂನು ಉಪಯೋಗ ಮಾಡಿ ಕ್ರಮ ತೆಗೆದುಕೊಂಡಿದೆ. ಸರ್ಕಾರ ಮತ್ತು ಕಾನೂನು ಇಲಾಖೆ ಹಾಗೂ ನಮ್ಮ ಇಲಾಖೆ ಸೇರಿ ಉಳಿದ ಕಾರ್ಖಾನೆಗಳ ವಿಚಾರದಲ್ಲಿ ಯಾವ ರೀತಿಯ ನಿಲುವನ್ನು ತೆಗೆದುಕೊಂಡು ಅವರಿಗೆ ಶಿಕ್ಷೆ ನಿಗದಿ ಮಾಡಬೇಕು, ಅವರ ಮಾಲನ್ನು ಸೀಜ್ ಮಾಡಬೇಕು, ಬಡ್ಡಿ ಕೊಡುವ, ಬಡ್ಡಿ ರಹಿತವಾದ ಬಾಕಿ ಹಣವನ್ನು ಕೊಡುವ ವಿಚಾರದ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ಆಲೋಚನೆ ಮಾಡುತ್ತಿದೆ. ಸರ್ಕಾರ ರೈತರ ಪರವಾಗಿ ಇದೆ. ಈ ಸರ್ಕಾರ ರೈತರ ಪರವಾದ ತೀರ್ಮಾನಗಳನ್ನು ಆದಷ್ಟು ಬೇಗ ತೆಗೆದುಕೊಳ್ಳುತ್ತದೆ.

ಶ್ರೀ ಎಸ್.ಎ.ರವೀಂದ್ರನಾಥ್: ಮಾನ್ಯ ಅಧ್ಯಕ್ಷರೆ, ಇದಕ್ಕಾಗಿಯೇ 200, 300 ಕೋಟಿ ರೂಪಾಯಿಗಳಷ್ಟು ಹಣ ಇದೆ. ರೈತರಿಗೆ ಹಣ ಕೊಡದ ಕಾರ್ಖಾನೆಯವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ, ನಾವು ರೈತರ ಪರವಾಗಿದ್ದೇವೆಂದು ಹೇಳಿದರೆ ಆಗುವುದಿಲ್ಲ. ಅದನ್ನು ಮಾಡಿ ತೋರಿಸಿದರೆ ಒಳ್ಳೆಯದು. ಅದಕ್ಕಾಗಿ ಒಬ್ಬರು ಸಚಿವರನ್ನು ನೇಮಕ ಮಾಡಿದ್ದಾರೆ. ಅವರು ಯಾವುದೇ ಕ್ರಮವನ್ನು ತೆಗೆದುಕೊಳ್ಳದೆ ರೈತರ ಪರವಾಗಿದ್ದಾರೆಂದು ಹೇಳಿದ ತಕ್ಷಣ ಏನೂ ಪ್ರಯೋಜನ ಆಗುವುದಿಲ್ಲ. ನಾನು ನಿಮ್ಮ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ, ರೈತರು ಸಾಕಷ್ಟು ಸಂಕಷ್ಟದಲ್ಲಿದ್ದಾರೆ. ಅಲ್ಲಿ ಮಳೆ ಬಂದಿಲ್ಲ, ಕಬ್ಬು ಒಣಗುತ್ತಿದೆ, ಸಕ್ಕರೆ ಕಂಪನಿಯವರು ಹಣ ಇಟ್ಟುಕೊಂಡು ಕುಳಿತರೆ ಹೇಗಾಗುತ್ತದೆ? ಸಕ್ಕರೆ ತಯಾರಾದ 24 ಗಂಟೆ ಒಳಗೆ ಅವರಿಗೆ ಬ್ಯಾಂಕಿನಿಂದ ಹಣ ಕೊಡುತ್ತಾರೆ. ಅವರು ಆ ಹಣವನ್ನು ರೈತರಿಗೆ ಕೊಡದೆ ಇರುವುದು ಅವರಿಗೆ ಬಹಳಷ್ಟು ಅನ್ಯಾಯ ಮಾಡಿದಂತಾಗುತ್ತದೆ. ಆದ್ದರಿಂದ ರೈತರಿಗೆ ಈ ತಿಂಗಳೊಳಗೆ ಬಡ್ಡಿ ಸಹಿತ ಹಣ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಇದು ಅವರು ಹೇಳಿದಷ್ಟು ಸುಲಭವಾದ ಕೆಲಸ ಅಲ್ಲ. ಸ್ಪಾಟ್‌ನಲ್ಲಿ ಡಿಸಿಷನ್ ಕೊಡುವುದಕ್ಕಾಗುವುದಿಲ್ಲ. ನಾವು ಮಾಡಿಯೇ ಇಲ್ಲವೆಂದು ಹೇಗೆ ಹೇಳುತ್ತೀರಿ? ಕುಂತನೂರು ಫ್ಯಾಕ್ಟರಿಗೆ ಅಟ್ಯಾಚ್‌ಮೆಂಟ್

ಕೊಟ್ಟಿದ್ದೇವೆ. We have asked the Deputy Commisioner to seize the material, sell it and make payment to our farmers. Why do you say that we have not taken action? ತಾವು ಹೇಳಿದ ಹಾಗೆ ಸರ್ಕಾರ ಇಲ್ಲ, ನಾವೂ ಕೂಡ ಸರ್ಕಾರದ ಪರವಾಗಿ ರೈತರಿಗೆ ಸಹಾಯ ಮಾಡುವುದಕ್ಕೆ ಎಲ್ಲಾ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. 42 ಕೋಟಿ ರೂಪಾಯಿಗಳಷ್ಟು ಹಣವನ್ನು ಒಂದು ತಿಂಗಳಲ್ಲಿ ಒಂದು ಡಿಸ್ಟ್ರಿಕ್ಟ್‌ನಲ್ಲಿ ಪೇಮೆಂಟ್ ಮಾಡಿಸಿದ್ದೇವೆ. ಇದು ತಮಗೆ ಗೊತ್ತಾ? ಉತ್ತರ ಕರ್ನಾಟಕದಲ್ಲಿ ಬೆಳಗಾಂ ಮತ್ತು ಬೇರೆ ಜಿಲ್ಲೆಗಳಲ್ಲಿ ಸುಮಾರು 250 ಕೋಟಿ ರೂಪಾಯಿಗಳಿಗೆ ಸರ್ಕಾರ ಬ್ಯಾಂಕ್ ಗ್ಯಾರಂಟಿ ಕೊಟ್ಟಿದೆ, ಇದು ತಮಗೆ ಗೊತ್ತಾ? ಅವರು ಹೇಳಿದ ಹಾಗೆ ಸ್ಪಾಟ್‌ನಲ್ಲಿ ಸೆಟ್ಲ್‌ಮೆಂಟ್ ಮಾಡುವುದಕ್ಕಾಗುವುದಿಲ್ಲ. We have to take so many things into consideration and implement the order and that order should help our farmers. That is the ultimate goal of our Government.

ಶ್ರೀ ಉಮೇಶ್ ಪಿ.ಕತ್ತಿ: ಮಾನ್ಯ ಸಕ್ಕರೆ ಮಂತ್ರಿಗಳು ರೈತರಿಗೆ ಕೊಡುವ ಬಾಕಿ ಜೊತೆಗೆ ಬಡ್ಡಿ ಸೇರಿಸುವ ಬಗ್ಗೆ ಹೇಳುತ್ತಿದ್ದಾರೆ. ಕಳೆದ ಎರೆಡು ವರ್ಷಗಳಿಂದ ಬೆಳಗಾಂ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಜನರಿಗೆ ಇದುವರೆಗೆ ದುಡ್ಡು ಬರಲಿಲ್ಲ. ನಾವು ದುಡ್ಡು ಕೊಡಿಸಿದರೆ ಸಾಕು ಎನ್ನುವ ಪರಿಸ್ಥಿತಿಯಲ್ಲಿ ಇದ್ದೇವೆ. ಅವರಿಗೆ ದುಡ್ಡು ಕೊಡಿಸಿದರೆ ಈ ಸರ್ಕಾರಕ್ಕೆ ರೈತರು ಧನ್ಯವಾದಗಳನ್ನು ಹೇಳುತ್ತಾರೆ. ಈ ದಿಸೆಯಲ್ಲಿ ತಾವು ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೇ, It is an isolated case. ತಾವು ಸಕ್ಕರೆ ಮಂತ್ರಿಗಳು ಇದ್ದಾಗ ಆ ಸಮಸ್ಯೆ ಇತ್ತು, ನೀವು ಮಂತ್ರಿಗಳಾಗುವುದಕ್ಕಿಂತ ಮುಂಚೆಯೂ ಇತ್ತು, ಈಗ ನಾನು ಬಂದಾಗ ಕೂಡ ಅದೇ ಪರಿಸ್ಥಿತಿ ಇದೆ. It has got an independent history. The Government is seized of the matter. We are addressing to this problem. Shortly, we will get a solution.

ಶ್ರೀ ಉಮೇಶ್ ಪಿ.ಕತ್ತಿ: ಸಕ್ಕರೆ ಕಾರ್ಖಾನೆಯನ್ನು ಯಾವುದೇ ಪುರಸಭೆಯವರು ನಡೆಸುವುದಕ್ಕೆ ಸಾಧ್ಯವಿಲ್ಲ. ಈ ದಿಸೆಯಲ್ಲಿ ಸರ್ಕಾರ ಕಾರ್ಯಕ್ರಮವನ್ನು ರೂಪಿಸಬೇಕಾಗುತ್ತದೆ. ರೈತರು ಪದೇ ಪದೇ ಮೇಲಿಂದ ಮೇಲೆ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಕೂಡಲೇ ಸರ್ಕಾರ ಇವುಗಳನ್ನು ವಹಿಸಿಕೊಂಡು ನಡೆಸುವ ಕಾರ್ಯಕ್ರಮ ಹಾಕಿಕೊಳ್ಳಬೇಕು, ಅಥವಾ ಮಾರಾಟ ಮಾಡುವ ಕಾರ್ಯಕ್ರಮ ಹಾಕಿ

ರೈತರಿಗೆ ಅನುಕೂಲ ಮಾಡಿ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರನ್ನು ಕೇಳಿ ಕೊಳ್ಳುತ್ತೇನೆ.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಅವರ ಜಿಲ್ಲೆಯಲ್ಲಿ ಗೋದಾವರಿ ಸಕ್ಕರೆ ಕಾರ್ಖಾನೆಯದು 23 ಕೋಟಿ ರೂಪಾಯಿಗಳ ಬಾಕಿ ಇತ್ತು, ಅದು ಎಷ್ಟು ಕಷ್ಟಗಳನ್ನು ಅನುಭವಿಸುತ್ತಿತ್ತು, ಹೊರ ದೇಶದಲ್ಲಿ ಇದ್ದವರನ್ನು ಹಿಡಿದು ತಂದು ಸಂಪೂರ್ಣವಾಗಿ ಹಣವನ್ನು ಕೊಡಿಸಿದ್ದೇವೆ. ವಿಷಾದನೀಯ ಸಂಗತಿ ಎಂದರೆ, ಅದು ಒಂದೇ ಫ್ಯಾಕ್ಟರಿ ಅಲ್ಲ, ಇಡೀ ರಾಜ್ಯದಲ್ಲಿ ಈ ತರಹದ ಎರಡು ಫ್ಯಾಕ್ಟರಿ ಇವೆ, ಒಂದು ಕುಂತನೂರು, ಮತ್ತು ಗೌರಿಬಿದನೂರು ಫ್ಯಾಕ್ಟರಿಗಳು. ಒಟ್ಟಾರೆ ಮೂರು ಫ್ಯಾಕ್ಟರಿಗಳಿಗೆ ಬಹಳ ದೊಡ್ಡ ತೊಂದರೆ ಇದೆ. ಅದನ್ನು ತೀರಿಸಲಿಕ್ಕೆ ಏನೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಈಗಾಗಲೇ ಮಾತುಕತೆ ನಡೆಸುತ್ತಿದೆ. ನಿಮ್ಮ ವಿಚಾರದಲ್ಲಿ ನಮಗೆ ವಿಷಾದನೀಯ ಪರಿಸ್ಥಿತಿ ಇದೆ. ಮೂರು-ನಾಲ್ಕು ವರ್ಷಗಳಿಂದ ರೈತರಿಗೆ ಹಣ ಕೊಡದೆ ಆಗಿರುವ ಕಷ್ಟಗಳ ಅರಿವು ನಮಗೆ ಇದೆ. ಮಾನ್ಯ ಮುಖ್ಯಮಂತ್ರಿಗಳು, ನಾವೂ ಮತ್ತು ಮಾನ್ಯ ಸಹಕಾರ ಮಂತ್ರಿಗಳು ಮೂರು ಜನ ಸೇರಿ ಅದಕ್ಕೆ ಪರಿಹಾರ ಕಂಡು ಹಿಡಿಯುತ್ತೇವೆ. ಆ ಪ್ರಕಾರ ರೈತರ ಪರವಾಗಿರುವ ಪರಿಹಾರ ಕಂಡು ಹಿಡಿಯುತ್ತೇವೆ. ಅದು ನಿಮ್ಮ ಮಿಸ್-ಮ್ಯಾನೇಜ್‌ಮೆಂಟ್, ಮಿಸ್-ರೂಲ್, ಮಿಸ್-ಯೂಸ್, ಎಕ್ಸ್‌ಪ್ಲಾಯಿಟೇಷನ್ ಎಲ್ಲಾ ಆಗಿದೆ. ನಿಮ್ಮ ಕಾಲದಲ್ಲೂ ಇತ್ತು, ನಮ್ಮ ಕಾಲದಲ್ಲಿಯೂ ಇದೆ. ನಿಮ್ಮ ಕಾಲಕ್ಕೂ ನಮ್ಮ ಕಾಲಕ್ಕೂ ವ್ಯತ್ಯಾಸ ಏನೆಂದರೆ ಫರ್ದರ್ ಎಕ್ಸ್‌ಪ್ಲಾಯಿಟೇಷನ್ ಆಗುವಂಥಾದ್ದನ್ನು ನಾವು ನಿಲ್ಲಿಸಿದ್ದೇವೆ. ರೈತರಿಗೆ ಕೊಡಬೇಕಾದ ಹಣದ ಬಗ್ಗೆ ಸಂಪೂರ್ಣವಾದ ಪರಿಹಾರ ಕೊಟ್ಟಿಲ್ಲ. ಗವರ್ನಮೆಂಟ್ ಗ್ಯಾರಂಟಿ ಕೊಟ್ಟಿದ್ದೇವೆ. ಹಾಗೆ ಗ್ಯಾರಂಟಿ ಕೊಟ್ಟರೂ ಕೂಡ ಹಣ ಡ್ರಾ ಮಾಡುವುದಕ್ಕಾಗಲಿಲ್ಲ. ಈ ಪರಿಸ್ಥಿತಿ ತಮಗೆ ಗೊತ್ತಿದೆ.

ಶ್ರೀ ಹೆಚ್.ಸಿ.ಬಸವರಾಜು: ರಾಜ್ಯದಲ್ಲಿ ಇದುವರೆಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಹಣ ಪಾವತಿ ಮಾಡದೆ ಇರುವ ಪಟ್ಟಿ ಹಾಗೂ ಬಡ್ಡಿ ಎಷ್ಟು ಬಾಕಿ ಇದೆ ಎಂದು ತಿಳಿಸಬೇಕು.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಸದಸ್ಯರು ಹೇಳಿದ ಕಾರ್ಖಾನೆ ವಿಚಾರದಲ್ಲಿ ಹೆಚ್ಚು ಆತಂಕವನ್ನು ತೋರಿಸಿ ಈಗ ತಾನೇ ದುಡ್ಡು ಬಿಡುಗಡೆ ಮಾಡಿ ಕೊಟ್ಟಿದ್ದೇವೆ. ಇನ್ನೂ ಮೂರು ಕೋಟಿ ರೂಪಾಯಿಗಳಷ್ಟು ಬಾಕಿ ಇದೆ. ಕೇಳುವುದು ಒಂದು ಪ್ರಶ್ನೆ ಅದಕ್ಕೆ 20 ಉಪಪ್ರಶ್ನೆಗಳನ್ನು ಕೇಳಿದರೆ ಹೇಗೆ? ಆ ಪಟ್ಟಿ ತಂದಿಲ್ಲ, ಆ ಪಟ್ಟಿಯನ್ನು ನಾನು ಒದಗಿಸುತ್ತೇನೆ.

ಶ್ರೀ ಎಸ್.ಎ.ರವೀಂದ್ರನಾಥ್: ಮಾನ್ಯ ಅಧ್ಯಕ್ಷರೆ, 15 ದಿವಸಗಳ ನಂತರ ಕೊಡತಕ್ಕಂತಹ ಹಣ ಇದೆ, ಅದಕ್ಕೆ ಈ ವರ್ಷದಿಂದಲಾದರೂ ಪಟ್ಟಿ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಅದನ್ನು ರೈತರಿಗೆ ಕೊಡಿಸುವ ಪ್ರಯತ್ನ ಮಾಡಬೇಕೆಂದು ನಾನು ನಿಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎ.ಕೃಷ್ಣಪ್ಪ: ಕೇಂದ್ರ ಸರ್ಕಾರದವರು ಈ ಸಕ್ಕರೆ ನಿಯಂತ್ರಣ ಕಾಯಿದೆಯ ಒಡೆಯರಾಗಿದ್ದಾರೆ. ಈ ಸಕ್ಕರೆ ನಿಯಂತ್ರಣ ಕಾಯಿದೆಯನ್ನು ಸಡಿಲ ಮಾಡಿ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಕೆಲವು ಅಧಿಕಾರಗಳನ್ನು ಕೊಟ್ಟಿದ್ದಾರೆ. ಆ ಅಧಿಕಾರವನ್ನು ಉಪಯೋಗ ಮಾಡಿ ಪ್ರಥಮವಾಗಿ ಒಂದು ಕಡೆ ಅದನ್ನು ಎಕ್ಸ್‌ಪೆರಿಮೆಂಟ್ ಮಾಡಿದ್ದೇವೆ. ಬೇರೆ ಬೇರೆ ಕಾರ್ಖಾನೆಗಳಲ್ಲಿ ಯಾವ ರೀತಿ ಮಾಡಬೇಕೆಂದು ಕಾನೂನು ಇಲಾಖೆಯವರೂ, ನಾವೂ ಕುಳಿತು ಮಾತನಾಡಿ ಒಂದು ಪರಿಹಾರ ಹುಡುಕುತ್ತೇವೆ.

(ಗೊಂದಲ)

(ಶ್ರೀ ಎಸ್.ಎ.ರವೀಂದ್ರನಾಥರವರು ಸಭಾಧ್ಯಕ್ಷರ ಮುಂದಿನ ಬಾವಿಗೆ ಬಂದರು)

ಅಧ್ಯಕ್ಷರು: ಕೇವಲ ಒಂದು ಪ್ರಶ್ನೆಗೆ ಐದಾರು ಸಪ್ಲಿಮೆಂಟರಿ ಪ್ರಶ್ನೆಗಳನ್ನು ಕೇಳುತ್ತಾ ಹೋದರೆ ಸದನ ನಡೆಸುವುದಾದರೂ ಹೇಗೆ? ಮಾನ್ಯ ವಿರೋಧ ಪಕ್ಷದ ನಾಯಕರೆ, ನೀವು ನಿಮ್ಮ ಪಕ್ಷದ ಸದಸ್ಯರಿಗೆ ಹೇಳಿ. ಧರಣಿ ಬಿಟ್ಟು ಬರಲು ಅವರಿಗೆ ತಿಳಿಹೇಳಿ. ಅವರಿಗೆ ಅವಕಾಶ ಕೊಡಲೇಬೇಕು ಎಂದರೆ ನಿಮ್ಮ ಪ್ರಶ್ನೆಯನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದಷ್ಟೆ. ತಾವು ಇದನ್ನು ಅರ್ಥ ಮಾಡಿಕೊಳ್ಳಿ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೇ, In the normal course, in the extended session, there will be no Question hour. ಇಂಥ ಸಂದರ್ಭದಲ್ಲಿ ಪ್ರಶ್ನೋತ್ತರಗಳು ಇರುವುದಿಲ್ಲ. ಏಕೆಂದರೆ ಸರ್ಕಾರದ ಕಾರ್ಯಕಲಾಪಗಳನ್ನು ನಡೆಸುವುದಕ್ಕೋಸ್ಕರ ಅಧಿವೇಶನವನ್ನು ಎಕ್ಸ್‌ಟೆಂಡ್ ಮಾಡಿಕೊಳ್ಳಲಾಗಿದೆ. ಇಂಥ ಸಮಯದಲ್ಲೂ ಕೂಡ ತಾವು ಮಾನ್ಯ ಸದಸ್ಯರುಗಳ ಕಳಕಳಿಯನ್ನು ಅರ್ಥ ಮಾಡಿಕೊಂಡು ಪ್ರಶ್ನೋತ್ತರಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಈ ಅವಕಾಶವನ್ನು ಸರ್ಕಾರವೂ ಕೂಡ ಬಳಸಿಕೊಂಡು ಯಾವ ರೀತಿಯಲ್ಲಿ ಉತ್ತರ ಕೊಡಬೇಕಾಗಿದೆಯೋ ಆ ರೀತಿಯಲ್ಲಿ ನಡೆದುಕೊಂಡು ಸರ್ಕಾರ ಉತ್ತರವನ್ನು ಒದಗಿಸಿದೆ. ಇಷ್ಟಾದರೂ ಧರಣಿ ನಡೆಸುತ್ತೇವೆಂದರೆ ಹೇಗೆ? ಸದನವನ್ನು ನಡೆಸುವುದು ಹೇಗೆ? ಇತ್ತೀಚೆಗೆ ಸದಸ್ಯರುಗಳು ಸದನದ ಬಾವಿಗೆ ಬಂದು ಕುಳಿತುಕೊಂಡು ಹೋಗುವುದು ಹೆಚ್ಚಾಗುತ್ತಿದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಸಚಿವರು ಇದು ಮುಂದುವರೆದ ಅಧಿವೇಶನವಾಗಿದೆಯೆಂಬುದನ್ನು ಹೇಳಿದರು. ಇದು ನಮಗೂ ತಿಳಿದ ವಿಷಯವೇ ಆಗಿದೆ. ಮಾನ್ಯ ಅಧ್ಯಕ್ಷರಾದ ತಾವೇ ತೀರ್ಪು ಕೊಟ್ಟು ತಡೆ ಹಿಡಿಯಲಾದ ಪ್ರಶ್ನೆಗಳನ್ನು ಮುಂದುವರೆದ ಅಧಿವೇಶನದಲ್ಲಿ ತೆಗೆದುಕೊಳ್ಳಲಾಗುವುದೆಂದು, ಆಗ ಸಪ್ಲಿಮೆಂಟರಿ ಪ್ರಶ್ನೆಗೆ ಅವಕಾಶ ಮಾಡಿಕೊಡಲಾಗುವುದೆಂದು ಹೇಳಿದ್ದೀರಿ. ಮಾನ್ಯ ಸಚಿವರುಗಳು ಯಾವ ಸಮಯದಲ್ಲಿ ಉತ್ತರ ಕೊಡಬೇಕಾಗಿತ್ತೋ ಆ ಸಮಯದಲ್ಲಿ ಉತ್ತರ ಕೊಟ್ಟಿಲ್ಲದ ಕಾರಣದಿಂದ ಇಂಥ ಸನ್ನಿವೇಶ ಬಂದಿರುವುದು. ಮಾನ್ಯ ಸದಸ್ಯರಾದ ರಮೀಂದ್ರನಾಥ್‌ರವರು ಕೆಲವೊಂದು ಮುಖ್ಯ ಅಂಶಗಳ ಬಗ್ಗೆ ಸರ್ಕಾರದಿಂದ ಸ್ಪಷ್ಟೀಕರಣ ಕೇಳುತ್ತಿದ್ದಾರೆ. ಅವಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ಇದು ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆಯೇ ಆಗಿದೆ.

ಅಧ್ಯಕ್ಷರು: ಸದನದಲ್ಲಿ ಬರುವುದೆಲ್ಲವೂ ರಾಜ್ಯಕ್ಕೆ ಸಂಬಂಧಪಟ್ಟವುಗಳೇ ಆಗಿರುತ್ತದೆ. ದಯವಿಟ್ಟು ತಾವುಗಳೆಲ್ಲರೂ ನನಗೆ ಸಹಕಾರ ಕೊಡಬೇಕು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈಗೇನು ಉತ್ತರ ಕೊಟ್ಟಿದ್ದಾರೆ ಅದು ಸರಿಯಾಗಿದೆ. ಅದಕ್ಕಿಂತಲೂ ಹೆಚ್ಚಿನ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಮಾನ್ಯ ಸಚಿವರ ಉತ್ತರವೇ ಯೋಗ್ಯವಾಗಿದೆ. ಆ ಕಾರಣದಿಂದ ಮಾನ್ಯ ರಮೀಂದ್ರನಾಥ್‌ರವರು ಧರಣಿ ಹಿಂತೆಗೆದುಕೊಂಡು ಅವರ ಸ್ಥಾನಕ್ಕೆ ಬರಬೇಕು. ಅಧ್ಯಕ್ಷರಾದ ತಾವು ಅವರಿಗೆ ಹೇಳಿ.

ಅಧ್ಯಕ್ಷರು: ಯಾರು ಎಷ್ಟು ಬೇಕಾದರೂ ಮಾತನಾಡಿಕೊಳ್ಳಿ. 11.45ಕ್ಕೆ ಪ್ರಶ್ನೋತ್ತರಗಳ ಅವಧಿಯನ್ನು ಕ್ಲೋಸ್ ಮಾಡುತ್ತೇನೆ.

ಶ್ರೀ ಕರಿಯಣ್ಣ: ಮಾನ್ಯ ಅಧ್ಯಕ್ಷರೆ, ಅಧ್ಯಕ್ಷರಾದ ತಾವು ಹೀಗೆ ಹೇಳಿದರೆ ಹೇಗೆ? ತಾವು ಬಹಳ ಅನುಭವಿಗಳು. ಸಭೆಯನ್ನು ನಿಯಂತ್ರಣ ಮಾಡಿ ಬೇರೆಯವರಿಗೆ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಮಾನ್ಯ ಕೃಷ್ಣಪ್ಪನವರೆ, ಮಾನ್ಯ ರಮೀಂದ್ರನಾಥ್ ಪ್ರಶ್ನೆಗೆ ಉತ್ತರ ಹೇಳಿ ಮಾನ್ಯ ರಮೀಂದ್ರನಾಥ್‌ರವರೆ, ತಾವು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ.

ಶ್ರೀ ಎ.ಕೃಷ್ಣಪ್ಪ(ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ಅವರೊಬ್ಬರಿಗೆ ಮಾತ್ರ ಇತರರ ಬಗ್ಗೆ ಕಳಕಳಿ ಇದೆಯೆಂದೇ ಹೇಳಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು: ಮಾನ್ಯ ಕೃಷ್ಣಪ್ಪನವರೆ, ಉತ್ತರ ಹೇಳಿ ಸಾಕು.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಂದ್ರನಾಥ್‌ರವರು ಹೇಳಿರುವ ವಿಚಾರದಲ್ಲಿ ನಾವೂ ಕೂಡ ಅಷ್ಟೇ ಸೀರಿಯಸ್ ಆಗಿದ್ದೇವೆ. ಆದರೆ ಕೆಲವೊಮ್ಮೆ ಆಡಳಿತ ವರ್ಗದವರು ನಮ್ಮ ಮೇಲೆ ಕ್ರಮ ತೆಗೆದುಕೊಂಡಾಗ ಕೋರ್ಟ್‌ಗಳಿಗೆ ಹೋಗಿರುವಂಥ ಸಂದರ್ಭಗಳು ಇವೆ. ಈಗ ಕೇಂದ್ರದವರು ಲಿಬರಲೈಸ್ ಮಾಡಿ, ಸ್ವಲ್ಪ.ಸಡಿಲ ಮಾಡಿ ಶುಗರ್ ಕಂಟ್ರೋಲ್ ಆಕ್ಟ್ ಬಗ್ಗೆ ರಾಜ್ಯ ಸರ್ಕಾರಕ್ಕೆ ಅಧಿಕಾರ ಕೊಟ್ಟಿದ್ದಾರೆ. ಅದರನ್ವಯ ನಾವು ಈಗಾಗಲೇ ಒಂದು ಕಾರ್ಯಾನೆ ಮೇಲೆ ಅಪ್ಲೈ ಮಾಡಿದ್ದೇವೆ. ಅದರದ್ದು ರಿಫರ್‌ಕೇಷನ್ ಈಗ ಬಂದಿದೆ, ಲೀಗಲ್ ರಿಫರ್‌ಕೇಷನ್ಸ್, ಟೆಕ್ನಿಕಲ್ ರಿಫರ್‌ಕೇಷನ್ಸ್ ಬಂದಿದೆ. ಆ ಒಂದು ಅಮೆಂಡೆಡ್ ರೂಲ್ಸ್‌ನ್ನು ಭಾರತ ಸರ್ಕಾರ ನಮಗೇನು ಕೊಟ್ಟಿತ್ತೋ ಅದರ ಮೇಲೆ ಕೆಲವು ಕ್ಲಾರಿಫಿಕೇಷನ್ಸ್ ಕೊಡಿ, ಆಗ ಮಾತ್ರ we will have more powers. ನಮಗೆ ಹೆಚ್ಚಿನ ಅಧಿಕಾರ ಬರುತ್ತದೆ ಎಂದು ಹೇಳಿ ಕೇಂದ್ರ ಸರ್ಕಾರಕ್ಕೆ ನಾವು ಕೇಳಿಕೊಂಡಿದ್ದೇವೆ. ಅದು ಬಂದ ಮೇಲೆ ರೈತರ ರಕ್ಷಣೆ ಮಾಡುವ ಸಲುವಾಗಿ ಯಾರ್ಯಾರ ಮೇಲೆ ಎಂಥೆಂಥ ಪ್ರಿಂಜೆಂಟ್ ಆಕ್ಷನ್ ತೆಗೆದುಕೊಳ್ಳಬೇಕಾಗುತ್ತದೋ ಆ ರೀತಿಯ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಲು ಬದ್ಧವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಬೆಳಗಾವಿ ಜಿಲ್ಲೆಯಲ್ಲಿ ಶಾಲಾ ಕೊಠಡಿಗಳ ನಿರ್ಮಾಣ.

197(2159)

ಶ್ರೀ ಉಮೇಶ್ ವಿಶ್ವನಾಥ ಕತ್ತಿ(ಹುಕ್ಕೇರಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಳಗಾವಿ ಜಿಲ್ಲೆಯಲ್ಲಿ ಈ ವರ್ಷ ಪ್ರಾಥಮಿಕ ಶಾಲಾ ಕೊಠಡಿ ನಿರ್ಮಿಸಲು ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ?

ಆ. ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನದಲ್ಲಿ ಬೆಳಗಾವಿ ಜಿಲ್ಲೆಯ ಪ್ರತಿ ತಾಲ್ಲೂಕಿಗೆ ಎಷ್ಟು ಶಾಲಾ ಕೊಠಡಿ ನಿರ್ಮಿಸಲಾಗಿದೆ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ. 2001-2002ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಕೊಠಡಿ ನಿರ್ಮಾಣಕ್ಕಾಗಿ ಬೆಳಗಾವಿ ಜಿಲ್ಲೆಗೆ ರೂ.9.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.